ಸಾಕ್ಷಿಯನ್ನು ದಿನಾಂಕ **07-04-2025** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆ:- ಪ್ರತಿವಾದಿ ನಂ.**2**(ಎ) ಪರ ವಕೀಲರಿಂದ:-

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನ್ಯಾಯಲಯದಲ್ಲಿ ಹಾಜರಪಡಿಸಿದ್ದು, ಅದರಲ್ಲಿ ಬರೆದ ಸಂಗತಿಗಳನ್ನು ನಾನೇ ಹೇಳಿ ಬರೆಯಿಸಿದ್ದು, ಅದು ನಿಜವಿರುತ್ತವೆ ಮತ್ತು ಅದನ್ನು ಓದಿ ನೋಡಿ ತಿಳಿದುಕೊಂಡು ಸಹಿ ಮಾಡಿದ್ದೇನೆ.

ಪಾಟೀ ಸವಾಲು: ವಾದಿ ಪರ ಶ್ರೀ.ಪಿ ವ್ಹಿ ಕೆ ವಕೀಲರಿಂದ:-

ನಾನು ಪದವಿ ಓದಿದ್ದೇನೆ. ನನ್ನ ಖುದ್ದು ಊರು ಗೋಠೆ ಗ್ರಾಮ. ಸಾಕ್ಷಿ ಮುಂದುವರೆದು 25 ವರ್ಷಗಳಿಂದ ಜಮಖಂಡಿಯಲ್ಲಿ ವಾಸವಾಗಿದ್ದೇನೆ ಎಂದು ಹೇಳುತ್ತಾರೆ. ನಾನು ಗುತ್ತಿಗೆದಾರ ಎಂದು ಕೆಲಸ ಮಾಡುತ್ತಿದ್ದೇನೆ. ನಾನು ಜಮಖಂಡಿಯಲ್ಲಿ ನಮ್ಮ ಅತ್ತೆಯವರ ಮನೆಯಲ್ಲಿ ವಾಸವಾಗಿದ್ದೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ವಕೀಲರು ಬೆರಳಚ್ಚು ಮಾಡಿಸಿರುತ್ತಾರೆ. ಈ ದಾವೆಯನ್ನು ಯಾರ ಯಾರ ಮೇಲೆ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಶಿರಗುಪ್ಪಿಯಲ್ಲಿರುವ ದಾವಾ ಸ್ವತ್ತುಗಳನ್ನು ನಾನು ನೋಡಿದ್ದೇನೆ. ಸದರಿ ಜಮೀನುಗಳ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಸದರಿ ಜಮೀನು ಒಂದೇ ಜಮೀನು ಇದ್ದು, ಅದರ ಯಾವುದೇ ಹಿಸ್ಸೆ ಆಗಿಲ್ಲ. ಸದರಿ ಜಮೀನಿನ ಚಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ನಾನು ಜಮೀನನ್ನು ನೋಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಹೇಳಲು ನ್ಯಾಯಾಲಯದಿಂದ ನನಗೆ ಯಾವುದೇ ಸಮನ್ಸ ಬಂದಿಲ್ಲ. ಪ್ರತಿವಾದಿ ನಂ.2(ಎ) ನನ್ನ ಸ್ನೇಹಿತ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಸಮಾಜದವರು ಎಂದು ಹೇಳುತ್ತಾರೆ. ಪ್ರತಿವಾದಿ ನಂ.2(ಎ) ರವರ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಸಿಟಿಎಸ್ ನಂ.5325 ಎಂದು ನಮೂದಿಸಿದ್ದು, ಅದು ಲಾಡ್ಜಗೆ ಸಂಬಂಧಿಸಿದ್ದು ಇರುತ್ತದೆ. ರೇಖಾ ಪರಾಂಜಪೆ ಮೃತಪಟ್ಟ ದಿನಾಂಕ ನನಗೆ ಹೇಳಲು ಬರುವುದಿಲ್ಲ. ಸಿಟಿಎಸ್ ನಂ.5325 ಇದು ಮೊದಲು ರೇಖಾ ಪರಾಂಜಪೆ ಇವರಿಗೆ ಸೇರಿದ್ದು ಇದ್ದು, ನಂತರ 2ನೇ ಪ್ರತಿವಾದಿಗೆ ಬಂದಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಪ್ರತಿವಾದಿ ನಂ.2(ಎ) ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಪ್ರತಿವಾದಿ ನಂ.**1** ಮತ್ತು **4** ರ ಪರ ಶ್ರೀ.ಡಿ ಎಂ ಜೆ ವಕೀಲರಿಂದ:-</u>

ಈ ದಾವೆಯಲ್ಲಿ ಯಾವೆಲ್ಲಾ ಆಸ್ತಿಗಳು ಸೇರಿವೆ ಎಂದು ನನಗೆ ಗೊತ್ತಿಲ್ಲ. ಸುಶೀಲಾಬಾಯಿ ಇವರನ್ನು ಒಂದು ಬಾರಿ ನಾನು ನೋಡಿದ್ದೇನೆ. ಈ ಕೇಸಿನಲ್ಲಿ 1ನೇ ಪ್ರತಿವಾದಿ ಯಾರಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಇನ್ನುಳಿದ ಪ್ರತಿವಾದಿಯರು ಯಾರಿದ್ದಾರೆ ಎಂದು ನನಗೆ ಗೊತ್ತಿಲ್ಲ. ಜಮಖಂಡಿಯಲ್ಲಿರುವ ಪ್ರಶಾಂತ ಹೋಟೇಲನ್ನು 1ನೇ ಪ್ರತಿವಾದಿ ನಡೆಸುತ್ತಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಪ್ರಶಾಂತ ಹೋಟೇಲ್ ಜಮಖಂಡಿಯಲ್ಲಿ ಎಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಸಿಟಿ ಎಸ್ ನಂ.5325 ಮೂಲತ: ಸುಶೀಲಾಬಾಯಿ ಸಿಂಗೆ ಇವರಿಗೆ ಸೇರಿತ್ತು. ಅದಕ್ಕಿಂತ ಮುಂಚೆ ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ಸುಶೀಲಾಬಾಯಿ ಮತ್ತು 1ನೇ ಪ್ರತಿವಾದಿ ಕೂಡಿಯೇ ವಾಸವಾಗಿದ್ದರು ಎಂದರೆ ಸರಿ. 1ನೇ ಪ್ರತಿವಾದಿ ಯಾವ ವರ್ಷದಲ್ಲಿ ಎಂ ಎಲ್ ಎ ಇದ್ದರು ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಗೆ ಎಷ್ಟು ಜನ ಮಕ್ಕಳು ಮತ್ತು ಎಷ್ಟು ಜನ ಸಹೋದರರು ಎಂದು ನನಗೆ ಗೊತ್ತಿಲ್ಲ. ಸುಶೀಲಾಬಾಯಿ ಮತ್ತು 1ನೇ ಪ್ರತಿವಾದಿ ಕೂಡಿ ವಾಸವಿದ್ದಾಗ ಕೆಲವೊಂದು ಆಸ್ತಿಗಳನ್ನು ಗಳಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸುಶೀಲಾಬಾಯಿ ಮತ್ತು 1ನೇ ಪ್ರತಿವಾದಿ ಇವರು ಪಾಲುದಾರಿಕೆಯಲ್ಲಿ ಹೋಟೇಲ ನಡೆಸುತ್ತಿದ್ದರ ಬಗ್ಗೆ ನನಗೆ ಗೊತ್ತಿಲ್ಲ. ಸುಶೀಲಾಬಾಯಿ ಮತ್ತು 1ನೇ ಪ್ರತಿವಾದಿ ಕೂಡಿ ಕಟ್ಟಡ ಕಟ್ಟಿ ಹೋಟೇಲ್ ನಡೆಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸುಶೀಲಾಬಾಯಿ ಮೃತಪಟ್ಟ ನಂತರ ಸದರಿ ಹೋಟೆಲನ್ನು 1ನೇ ಪ್ರತಿವಾದಿ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ಸುಶೀಲಾಬಾಯಿ ಇವರು 1ನೇ ಪ್ರತಿವಾದಿ ಒಬ್ಬರಿಗೆ ಮಾತ್ರ ಕೆಲವೊಂದು ಆಸ್ತಿಗಳನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಸುಶೀಲಾಬಾಯಿ ಮೃತಪಟ್ಟ ನಂತರ ಹೋಟೆಲನ್ನು ನಡೆಸಿಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ನಾನು ಅಪ್ರಾಪ್ತ ವಯಸ್ಕನವನಿದ್ದಾಗ ಸುಶೀಲಾಬಾಯಿ ಮತ್ತು 1ನೇ ಪ್ರತಿವಾದಿ ನಡುವೆ ಏನೇನು ವ್ಯವಹಾರಗಳು ಆಗಿದ್ದವು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. 1ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಮೃತ ರೇಖಾ ಮತ್ತು ಇತರರು ಸೇರಿಕೊಂಡು ಮೃತ್ಯುಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳಲ್ಲಿ ರೇಖಾ ಪರಾಂಜಪೆ ಮತ್ತು ಅವರ ವಾರಸುದಾರರು ಎಂದಿಗೂ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸದರಿಯವರು ಸ್ವಾಧೀನದಲ್ಲಿ ಇದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ಪ್ರತಿವಾದಿ ನಂ.2(ಎ) ರವರು ಸಾಕ್ಷಿ ಹೇಳಲು ಕರೆದಿದ್ದರಿಂದ ನಾನು ಬಂದಿದ್ದೇನೆ ಎಂದರೆ ಸರಿ. ಪ್ರತಿವಾದಿ ನಂ.2(ಎ) ಹೇಳಿಕೊಟ್ಟ ಹಾಗೆ ನಾನು ಸಾಕ್ಷಿ ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಂತಹ ಎಲ್ಲಾ ವಿಷಯಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. 15 ವರ್ಷಗಳಿಂದ ಮೃತ ರೇಖಾ ಇವರು ಕಬ್ಜೆಯಲ್ಲಿ ಇದ್ದು, ಅದನ್ನು ನಾನು ನೋಡಿಕೊಂಡು ಬಂದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವತ್ತೂ ಕೂಡ ಜಮಖಂಡಿಯಲ್ಲಿ ವಾಸವಾಗಿಲ್ಲ ಅನ್ನುವುದು ಸರಿಯಲ್ಲ. 1ನೇ ಪ್ರತಿವಾದಿ ಸ್ವಾಧೀನದಲ್ಲಿ ಇರುವುದು ಗೊತ್ತಿದ್ದರೂ ಸಹ ಪ್ರತಿವಾದಿ ನಂ.2(ಎ) ನನ್ನ ಸ್ನೇಹಿತನಾಗಿರುವುದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ನಂ.3, 5 ಮತ್ತು 6 ರ ಪರ ವಕೀಲರು ಗೈರು ಹಾಜರು ಇದ್ದು, ಪಾಟೀಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಸಹಿ/-
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.